## ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ(ನೋಂ.):

**ಉದ್ದೇಶ:**

ಕೈಗಾರಿಕಾ ಸಮುದಾಯಕ್ಕೆ ತೊಂದರೆ ಅಥವಾ ಹಾನಿಯಾಗದಂತೆ, ಕೈಗಾರಿಕಾ ಚಟುಚಟಿಕೆಯಲ್ಲಿ ಸುರಕ್ಷತೆಯ ಮಾನದಂಡಗಳನ್ನು ಅಳವಡಿಸಿಕೊಂಡು ಔದ್ಯೋಗಿಕ ಸುರಕ್ಷತೆಯ ಗುಣಮಟ್ಟವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಗಮನಹರಿಸುವುದು ಅವಶ್ಯವಾಗಿದೆ. ಕೆಲಸದ ವಾತಾವರಣ ಮತ್ತು ಸುರಕ್ಷತಾ ಕ್ಷೇತ್ರದಲ್ಲಿನ ಜ್ಞಾನವನ್ನು ಪರಿಣಾಮಕಾರಿಯಾದ ಶಿಕ್ಷಣ ಮತ್ತು ಸಂವಹನದ ಮೂಲಕ ಪ್ರಚಾರ ಮಾಡುವುದು ಹಾಗೂ ಕಾರ್ಮಿಕರ ಮನಸ್ಸನ್ನು ಪುನಶ್ಚೇತನಗೊಳಿಸುವುದು ಪರಿಣಾಮಕಾರಿ ಪರಿಕರಗಳಲ್ಲಿ ಒಂದಾಗಿರುತ್ತದೆ. ಸಂಸ್ಥೆಯ ಮುಖ್ಯ ಧ್ಯೇಯೋದ್ದೇಶ ಸುರಕ್ಷತೆ ಮತ್ತು ಔದ್ಯೋಗಿಕ ಆರೋಗ್ಯ ಕ್ಷೇತ್ರದಲ್ಲಿ ಅಭಿಯಾನ ಕೈಗೊಂಡು, ಸುರಕ್ಷತಾ ಕಾರ್ಯಚಟುವಟಿಕೆಗಳನ್ನು ಅಳವಡಿಸಿಕೊಂಡು, ಅಪಘಾತರಹಿತ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವುದಾಗಿರುತ್ತದೆ. ಈ ಸಂಸ್ಥೆಯನ್ನು ಸರ್ಕಾರದ ಆದೇಶಾನುಸಾರ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿಯಲ್ಲಿ ಸಂಘವಾಗಿ ನೋಂದಾಯಿತವಾಗಿರುತ್ತದೆ. (ನೋಂದಣಿ ಸಂಖ್ಯೆ: 186/2007–08 ದಿ: 31.03.2008)

**ಸಂಸ್ಥೆಯ ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ:**

ಸಂಸ್ಥೆಯ ಕಛೇರಿಯ ವಿಳಾಸ ಈ ಕೆಳಗಿನಂತಿದೆ;

ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ
3ನೇ ಮಹಡಿ, ಕಲ್ಯಾಣ–ಸುರಕ್ಷಾ ಭವನ,
ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು – 560029

ದೂರವಾಣಿ ಸಂಖ್ಯೆ: ಶ್ರೀ ಮಹೇಶ್ – 7411979411
Email Address: kssikarnataka@gmail.com

**ಸಂಸ್ಥೆಯ ಚಟುವಟಿಕೆಗಳು:**

ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸುರಕ್ಷತೆ, ಔದ್ಯೋಗಿಕ ಆರೋಗ್ಯ ಮತ್ತು ಕೆಲಸದ ವಾತಾವರಣದ ಬಗ್ಗೆ ಅರಿವು ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿ ಸಂಸ್ಥೆಯು ಅದರ ಧ್ಯೇಯೋದ್ದೇಶವನ್ನು ಪರಿಣಾಮಕಾರಿಯಾಗಿ ಈಡೇರಿಸುತ್ತಿದೆ. ಇವುಗಳಲ್ಲಿ ಬಹುಮುಖ್ಯವಾಗಿ ಕಾರ್ಖಾನೆಗಳ ಆವರಣದಲ್ಲಿಯೇ ಕಾರ್ಮಿಕರಿಗೆ / ಮೇಲ್ವಿಚಾರಕರಿಗೆ ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳನ್ನು ನಡೆಸಿ ಅರಿವು ಮೂಡಿಸುವುದು ಹಾಗೂ ಕಾರ್ಖಾನೆಯ ಆಡಳಿತವರ್ಗದವರು ಮತ್ತು ಹಿರಿಯ ಅಧಿಕಾರಿಗಳಿಗೆ ಕಾನೂನು, ಸುರಕ್ಷತೆ, ಔದ್ಯೋಗಿಕ ಆರೋಗ್ಯ, ವ್ಯಕ್ತಿತ್ವ ವಿಕಸನ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟಂತೆ ವಿಚಾರ ಸಂಕಿರಣ / ಕಾರ್ಯಗಾರಗಳನ್ನು ನಡೆಸುವುದಾಗಿರುತ್ತದೆ. ಕಾರ್ಖಾನೆಗಳಲ್ಲಿ ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿ

ಕಾರ್ಯನಿರ್ವಹಿಸುತ್ತಿರುವ ಸುರಕ್ಷತಾ ಅಧಿಕಾರಿಗಳು, ಕಲ್ಯಾಣಾಧಿಕಾರಿಗಳು, ಸುರಕ್ಷತಾ ಸಮಿತಿ ಸದಸ್ಯರು ಮತ್ತು ವೈದ್ಯಾಧಿಕಾರಿಗಳಿಗೆ ನಿಯಮಾನುಸಾರ ಇರುವ ಅವರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮನದಟ್ಟು ಮಾಡುವ ತರಬೇತಿ ಕಾರ್ಯಕ್ರಮಗಳನ್ನು ಸಹ ಸಂಸ್ಥೆಯ ವತಿಯಿಂದ ನಡೆಸಿಕೊಡಲಾಗುತ್ತಿದೆ. ಅಲ್ಲದೆ ಕಾರ್ಖಾನೆಗಳ ಅಪೇಕ್ಷೆಗನುಗುಣವಾಗಿ ಪಠ್ಯಕ್ರಮ ವಿನ್ಯಾಸಗೊಳಿಸಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.